# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 12

ಸಿ.ಡಬ್ಲ್ಯೂಃ 31

| | |
|---|---|
| ಸಾಕ್ಷಿದಾರರ ಹೆಸರು | ಸುರೇಶ್ ಎಂ. |
| ತಂದೆಯ ಹೆಸರು | ಸುಬ್ರಮಣ್ಯ ಭಟ್ |
| ವಯಸ್ಸು | 58 ವರ್ಷ |
| ಉದ್ಯೋಗ | ಎ.ಎಸ್.ಐ, ಕುಂದಾಪುರ ಟ್ರಾಫಿಕ್ ಪೊಲೀಸ್ ಠಾಣೆ |
| ವಿಳಾಸ | ಕುಂದಾಪುರ |

ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 08-06-2019 ರಿಂದ 26-06-2024 ರವರೆಗೆ ಪಡುಬಿದ್ರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಸೇವೆ ಸಲ್ಲಿಸಿದ್ದೇನೆ.

2) ತಾರೀಕು 22-05-2020 ರಂದು ಚಾಸಾ-32 ಇವರ ಸೂಚನೆಯಂತೆ ನಾನು ಮಣಿಪಾಲ ಕೆಎಂಸಿ ಆಸ್ಪತ್ರೆಗೆ, ಚಾಸಾ-28 ಇವರ ಜೊತೆ ತೆರಳಿ, ಅಲ್ಲಿ ಶವಾಗಾರಕ್ಕೆ ತೆರಳಿ ಅಲ್ಲಿ ಇದ್ದ ಸದಾಕತ್ ಅನ್ಸಾರಿ ಈತನ ಶವದ ಮೇಲೆ ಚಾಸಾ-9, 10, 11, ಇವರ ಸಮಕ್ಷಮ ಮಧ್ಯಾಹ್ನ 2.00 ರಿಂದ 4.00 ಗಂಟೆಯವರೆಗೆ ಶವ ತನಿಖೆ ಮಾಡಿರುತ್ತೇನೆ. ಆತನ ಶವವನ್ನು 2 ನೇ ಆರೋಪಿ ಗುರುತಿಸಿದ್ದನು. ಶವ ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿ-13 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-13(ಬಿ) ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋ ನಿಶಾನೆ ಪಿ-2 ಮತ್ತು 14 ಆಗಿದೆ. ಅದೇ ದಿನ ಚಾಸಾ-12 ಇವರ ಹೇಳಿಕೆಯನ್ನು ದಾಖಲಿಸಿದ್ದೆ. ನಂತರ ಮೃತದೇಹವನ್ನು ವೈದ್ಯಕೀಯ ಪರೀಕ್ಷೆಗಾಗಿ ಚಾಸಾ-28 ಇವರ ಭದ್ರಿಕೆಯಲ್ಲಿ ಕಳುಹಿಸಿದ್ದೆ. ಮರಣೋತ್ತರ ಪರೀಕ್ಷೆಯಾದ ನಂತರ ಶವವನ್ನು ಚಾಸಾ-28, 2 ನೇ ಆರೋಪಿಯ ವಶಕ್ಕೆ ನೀಡಿದ್ದರು.

**ಪಾಟೀಸವಾಲುಃ ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ ಇಲ್ಲ ಎಂದು ಸಲ್ಲಿಸಿದ್ದಾರೆ**

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ